ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 08 ಪಬವ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:15.02.2018.
(ನೆನಪೋಲೆ)

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ದಿ ಮತ್ತು ಪಂ.ರಾಜ್ ಇಲಾಖೆ
ಬೆಂಗಳೂರು.

ಇವರಿಗೆ:

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ವಿಜಯಪುರ,
ಚಿಕ್ಕಮಗಳೂರು, ದಾವಣಗೆರೆ, ದಕ್ಷಿಣ ಕನ್ನಡ, ಧಾರವಾಡ,
ಗದಗ, ಕಲಬುರ್ಗಿ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ,
ಮಂಡ್ಯ, ರಾಯಚೂರು, ಶಿವಮೊಗ್ಗ, ತುಮಕೂರು,ಚಿಕ್ಕಬಳ್ಳಾಪುರ,
ರಾಮನಗರ, ಯಾದಗಿರಿ. ಜಿಲ್ಲಾ ಪಂಚಾಯತ್,**

ಮಾನ್ಯರೇ,

ವಿಷಯ: 2018ನೇ ಸಾಲಿನಲ್ಲಿ ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಸೇವಾ ವಿವರಗಳನ್ನು ಒದಗಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018ನೇ ಸಾಲಿನ ಮೇ ತಿಂಗಳ ಅವಧಿಯಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯು ಅವರ ಸ್ವಂತ ಜಿಲ್ಲೆ ಅಥವಾ ತಾಲ್ಲೂಕುಗಳಾಗಿದ್ದಲ್ಲಿ ಹಾಗೂ ಸದರಿ ಅಧಿಕಾರಿಯು ಸತತವಾಗಿ ಮೂರು ವರ್ಷಗಳಿಗಿಂತ ಅಧಿಕವಾಗಿ ಒಂದೇ ಹುದ್ದೆಯಲ್ಲಿ ಹಾಗೂ ಒಂದೇ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಅಧಿಕಾರಿಗಳನ್ನು ವರ್ಗಾಯಿಸುವಂತೆ ಚುನಾವಣಾ ಆಯೋಗವು ರಾಜ್ಯ ಸರ್ಕಾರಕ್ಕೆ ತಿಳಿಸಿರುತ್ತದೆಯೆಂದು ದಿನಾಂಕ:20.01.2018ರಲ್ಲಿನ ದಿನಪತ್ರಿಗಳಲ್ಲಿ ಪ್ರಕಟಿಸಿರುತ್ತದೆ. ಆದುದರಿಂದ ನಿಮ್ಮ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪ ಕಾರ್ಯದರ್ಶಿ/ಯೋಜನಾ ನಿರ್ದೇಶಕರು/ ಸಹಾಯಕ ಕಾರ್ಯದರ್ಶಿ/ಸಹಾಯಕ ಯೋಜನಾಧಿಕಾರಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳ ಸಂಬಂಧ ಸೇವಾ ವಿವರಗಳನ್ನು, (ಅಂದರೆ ಅವರ ಸ್ವಂತ ತಾಲ್ಲೂಕು ಯಾವ ದಿನಾಂಕದಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ ಇತ್ಯಾದಿ) ಮರು ಟಪಾಲಿನಲ್ಲಿ ಸರ್ಕಾರಕ್ಕೆ ಒದಗಿಸುವಂತೆ ದಿನಾಂಕ:23.11.2017ರಂದು ಕೋರಲಾಗಿದ್ದು, ಇಂದಿನವರೆವಿಗೂ ಸ್ವೀಕೃತವಾಗಿರುವುದಿಲ್ಲ ಈ ಬಗ್ಗೆ ವೈಯಕ್ತಿಕ ಗಮನ ಹರಿಸಿ ಕೋರಲಾದ ಮಾಹಿತಿಯನ್ನು ಮರು ಟಪಾಲಿನಲ್ಲಿ ಕೂಡಲೆ ಒದಗಿಸುವಂತೆ ಕೋರಲು ಆದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

15/2/18

(ಟಿ.ಎಸ್.ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)
ಗ್ರಾಮೀಣಾಭಿವೃದ್ದಿ ಮತ್ತು ಪಂ.ರಾ ಇಲಾಖೆ